# ಹೇವವೆಲ್ಲಿದುಹಯ್ಯ ವೈಕುಂಠಪತಿಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 620.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 447.
3. **Note:** Lyrics in both the above references are same.

ರಾಗ: ಶಂಕರಾಭರಣ ತಾಳ: ಅಟ

ಹೇವವೆಲ್ಲಿದುಹಯ್ಯ ವೈಕುಂಠಪತಿಗೆ || ಪ ||
ಮೌನದಿಂ ಭಾರ್ಗವನು ಮಾತೆಯ ಶಿರವ ತರಿದ || ಅಪ ||

ಒಬ್ಬ ಮಾವನ ಕೊಂದ, ಒಬ್ಬ ಮಾವನ ಎಸೆದ
ಒಬ್ಬ ಮಾವನ ಕೂಡೆ ಕಡಿದಾಡಿದ
ಒಬ್ಬ ಭಾವನ ಹಿಡಿದು ಹೆಡೆಮುಡಿಯ ಕಟ್ಟಿದ
ಒಬ್ಬ ಮೈದುನಗೆ ಬಂಡಿಯ ಬೋವನಾದ || 1 ||

ಕುಂಭಿನಿಗೆ ಪತಿಯಾದ, ಕುಂಭಿನಿಗೆ ಸುತನಾದ
ಕುಂಭಿನೀ ಮಗನ ಸಂಹಾರ ಮಾಡ್ದ
ಅಂಬುಧಿಗೆ ಪಿತನಾದ, ಅಂಬುಧಿಗೆ ಸುತನಾದ
ಅಂಬುಧೀ ಜಾತೆಗೆ ಸ್ವಾಮಿಯಾದ || 2 ||

ಬೊಮ್ಮನ ಸಂಹರಿಸಿ ಅವನ ಮಕ್ಕಳನು
ಈ ಮಹಿಯೊಳಗೆ ಅವರ ಹತಮಾಡಿದ
ರಮ್ಮೆ ವೈಕುಂಠ ಪತಿ ಪುರಂದರ ವಿಠಲ
ಬೊಮ್ಮ ಮೂರುತಿಗೇಕೆ ಬಂಧು ಬಳಗ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಹೇವ** – ನಾಚಿಕೆ, ಮಾನ.

**ಭಾರ್ಗವನು...** – ಪರಶುರಾಮನು ತನ್ನ ತಾಯಿ ರೇಣುಕೆಯ ತಲೆಯನ್ನು ಕತ್ತರಿಸಿದ ಪ್ರಸಂಗ.

**ಒಬ್ಬ ಮಾವನ ಕೊಂದ** – ಕಂಸನನ್ನು (ಸೋದರಮಾವ).

**ಒಬ್ಬ ಮಾವನ ಎಸೆದ** – ರಾಮಾವತಾರದಲ್ಲಿ ಸಮುದ್ರರಾಜನನ್ನು ಬಾಣದಿಂದ ದೂರ ಸರಿಸಿದ ಪ್ರಸಂಗ; ಲಕ್ಷ್ಮಿಯು ಸಮುದ್ರತನಯೆಯಾದುದರಿಂದ ಸಮುದ್ರವು ವಿಷ್ಣುವಿಗೆ ಮಾವ.

**ಒಬ್ಬ ಮಾವನ ಕೂಡೆ ಕಡಿದಾಡಿದ** – ಕೃಷ್ಣನ ಹೆಂಡತಿ ಜಾಂಬವತಿಯ ತಂದೆ ಋಕ್ಷರಾಜ ಜಾಂಬವಂತನೊಂದಿಗೆ ಕಾದಾಡಿದ ಪ್ರಸಂಗ (ಸ್ಯಮಂತಕ ಮಣಿಯನ್ನು ತಂದ ಸಂದರ್ಭ).

**ಒಬ್ಬ ಭಾವನ ಹಿಡಿದು ಹೆಡೆಮುರಿಯ ಕಟ್ಟಿದ** – ರುಕ್ಮಿಣಿಯ ಸೋದರ ರುಕ್ಮನನ್ನು (ರುಕ್ಮಿಣೀ ಕಲ್ಯಾಣದ ಸಂದರ್ಭದಲ್ಲಿ).

**ಒಬ್ಬ ಮೈದುನಗೆ ಬಂಡಿಯ ಬೋವನಾದ** – ಅರ್ಜುನನಿಗೆ ಸಾರಥಿಯಾದದ್ದು.

**ಕುಂಭಿಣಿಗೆ ಪತಿಯಾದ – ಕುಂಭಿಣಿ** = ಭೂಮಿ. ವರಾಹಾವತಾರದಲ್ಲಿ ಭೂಮಿಯನ್ನು ಪತ್ನಿಯಾಗಿ ಸ್ವೀಕರಿಸಿದನು

**ಕುಂಭನಿಗೆ ಸುತನಾದ** – ಹಾಲು ಮೊಸರಿನ ಮಡಕೆಗಳನ್ನು ಹೊತ್ತು ಹಾಲು ಮೊಸರನ್ನು ಮಾರಾಟ ಮಾಡುತ್ತಿದ್ದ ಜನರೊಡೆಯ ನಂದಗೋಪನಿಗೆ ಕುಂಭಿಯೆಂದು ಹೆಸರು; ಅವನ ಹೆಂಡತಿ ಯಶೋದೆ ಕುಂಭಿನಿ; ಕೃಷ್ಣನ ಸಾಕುತಾಯಿ.

**ಕುಂಭಿನೀ ಮಗನ ಸಂಹಾರ ಮಾಡಿದ** – ಯದುವಂಶದ ದುಮಘೋಷನ ಹೆಂಡತಿ ಶ್ರುತಶ್ರವೆ (ವಸುದೇವನ ಸೋದರಿ)ಗೆ ಕುಂಭಿನಿಯೆಂಬ ಹೆಸರಿದ್ದಿತು; ಅವಳ ಮಗ ಶಿಶುಪಾಲ. ಅವನನ್ನು ಯುಧಿಷ್ಠಿರನ ರಾಜಸೂಯಯಾಗದ ಸಂದರ್ಭದಲ್ಲಿ ಕೃಷ್ಣನು ಕೊಂದನು.

**ಅಂಬುಧಿಗೆ ಪಿತನಾದ** – ಇಲ್ಲಿ ಅಂಬುಧಿಯೆಂದರೆ ನದಿ; ಗಂಗೆಯು ವಿಷ್ಣುವಿನ ಪಾದಗಳಿಂದ ಹುಟ್ಟಿದಳಾಗಿ (ತ್ರಿವಿಕ್ರಮಾವತಾರದಲ್ಲಿ) ಗಂಗೆ ವಿಷ್ಣುವಿನ ಮಗಳು.

**ಅಂಬುಧಿಗೆ ಸುತನಾದ** – ಮತ್ಸ್ಯಾವತಾರ; ಮೀನು ಸಮುದ್ರದಲ್ಲೇ ಹುಟ್ಟುವುದರಿಂದ ನೀರಿನ ಮಗು.

**ಅಂಬುಧೀಜಾತೆಗೆ ಸ್ವಾಮಿ** – ಸಮುದ್ರಮಥನ ಸಂದರ್ಭದಲ್ಲಿ ಸಮುದ್ರದಿಂದ ಹೊರಹೊಮ್ಮಿದವಳು ಲಕ್ಷ್ಮಿ; ಅವಳು ನಾರಾಯಣನನ್ನು ವರಿಸಿದಳು.

**ಬೊಮ್ಮನ ಸಂಹರಿಸಿ...** – ಸಂದರ್ಭ ತಿಳಿಯುವುದಿಲ್ಲ.

**ರಮ್ಮೆ** – ರಮೆ, ಲಕ್ಷ್ಮಿ.

**ಬೊಮ್ಮ ಮೂರುತಿ** – ಪರಬ್ರಹ್ಮ; ಏಕಮೇವಾದ್ವಿತೀಯ.

**Classification:** Mundige
**Ankita:** purandara vittala
**Location:** NA
**Category:** Vishnu Stuti, dashavatara
**Sub-Category:** Vishnu, dashavatara, Lakshmi, vaikunta, brahma, makkalu, maga, Samudra, bhumi, tande, pati, arjuna, kamsa, shishupala, gange, yashode,
**Pravachana:** NA
**Explanation:** Smt Padma Shireesh Bojji, Mysore